ಆನ್ವಯಿಕ ಕಲಿಕೆಯಿಂದಾಗಿ ಕಲಿಯುವ ವಿಷಯ ವಿದ್ಯಾರ್ಥಿಯ ಮನಸ್ಸಿನಲ್ಲಿ ಸ್ಪಷ್ಟವಾಗಿ ಉಳಿಯುವಂತೆ ಮಾಡುವುದಲ್ಲದೆ, ಕಲಿಕಾ ಪ್ರಕ್ರಿಯೆಯನ್ನು ಸ್ವಾರಸ್ಯಕರವನ್ನಾಗಿಯೂ ಮಾಡುತ್ತದೆ. ಇಲ್ಲಿನ ಆನ್ವಯಿಕ ಕಲಿಕೆಯ ಒಳನೋಟಗಳು ವಿದ್ಯಾರ್ಥಿಯ ಓದುವ ವಿಧಾನವನ್ನೇ ಬದಲಿಸಬಲ್ಲಷ್ಟು ಪರಿಣಾಮಕಾರಿಯಾಗಿವೆ.



# ಕಲಿಕಾ ದೃಢೀಕರಣಕ್ಕೆ ಆನ್ವಯಿಕ ಕಲಿಕೆ

ಅರವಿಂದ ಚೊಕ್ಕಾಡಿ

ನೀವು ನೂರು ರೂಪಾಯಿ ಕರೆನ್ಸಿ ನೋಟು ನೋಡಿ. ಅದರಲ್ಲಿ 'ಐ ಪ್ರಾಮಿಸ್ ಟು ಪೇ ದ ಬೇರರ್ ದ ಸಮ್ ಆಫ್ ಹಂಡ್ರೆಡ್ ರುಪೀಸ್' ಎಂದು ಬರೆದಿದ್ದು, ಅದರ ಕೆಳಗೆ ರಿಸರ್ವ್ ಬ್ಯಾಂಕ್ ಗವರ್ನರ್ ಸಹಿ ಮಾಡಿರುತ್ತಾರೆ. ಅದರರ್ಥ ಆ ರೂಪಾಯಿಯನ್ನು ಹೊಂದಿರುವವನಿಗೆ ನೂರು ರೂಪಾಯಿ ಮೌಲ್ಯವನ್ನು ಚಲಾವಣೆಗೆ ತರಲು ಅಧಿಕಾರವನ್ನು ನೀಡಿದ್ದೇನೆ ಎಂದು. ಏಕೆಂದರೆ ಆ ಕಾಗದದ ತುಂಡಿಗೆ ನೂರು ರೂಪಾಯಿಯ ಮೌಲ್ಯ ಬರುವುದೇ ಕಾನೂನಿನ ಪ್ರಕಾರ ರಿಸರ್ವ್ ಬ್ಯಾಂಕ್ ಗವರ್ನರ್ ಆ ಮೌಲ್ಯವನ್ನು ದೃಢಪಡಿಸಿದಾಗ. ಇಲ್ಲದಿದ್ದರೆ ಆ ಕಾಗದಕ್ಕೆ ಯಾವ ಬೆಲೆಯೂ ಇಲ್ಲ.

ಹಾಗಿದ್ದರೆ ಮೌಲ್ಯದ ಮಾನದಂಡ ಯಾವುದು? ಪುರಾತನ ಕಾಲದಿಂದಲೂ ಚಿನ್ನವನ್ನು ಬೆಲೆಯ ಮೌಲ್ಯ ಎಂದು ಭಾವಿಸಲಾಗಿದೆ. ಆದರೆ ಕೈಯಲ್ಲಿರುವ ನೂರು ರೂಪಾಯಿಗೆ ಅಷ್ಟೇ ಮೌಲ್ಯದ ಚಿನ್ನದ ಭದ್ರತೆ ಇಲ್ಲ. ಯಾಕೆಂದರೆ ರಿಸರ್ವ್ ಬ್ಯಾಂಕ್ ಸ್ವರ್ಣ ಮಾನದಂಡದ ದರದಲ್ಲಿ ಕರೆನ್ಸಿ ನೋಟುಗಳನ್ನು ಮುದ್ರಿಸುವುದಿಲ್ಲ. ಅದು ಕನಿಷ್ಠ ಕಾಪು ನಿಧಿ ಪದ್ಧತಿಯಂತೆ ಕರೆನ್ಸಿ ನೋಟುಗಳನ್ನು ಮುದ್ರಿಸುತ್ತದೆ. ಅಂದರೆ 115 ಕೋಟಿ ರೂಪಾಯಿ ಮೌಲ್ಯದ ಚಿನ್ನ ಮತ್ತು 85 ಕೋಟಿ ರೂಪಾಯಿ ಮೌಲ್ಯದ ದಾಖಲೆ ಪತ್ರದ ಭದ್ರತೆ; ಒಟ್ಟಾಗಿ ಇನ್ನೂರು ಕೋಟಿ ರೂಪಾಯಿ ಮೌಲ್ಯದ ಭದ್ರತೆ ಇರಿಸಿಕೊಂಡು ಎಷ್ಟು ಬೇಕಾದರೂ